ಎನ್ನುವಂಥ ಗಹನವಾದ ಹಾಡುಗಳನ್ನೂ ಬೇಂದ್ರೆ ಬರೆಯುತ್ತಾ ಇದ್ದರು. ಹಾಗೇ ಕೆ.ಎಸ್.ನ ಗದ್ಯಕ್ಕೆ ವಿಶೇಷವಾಗಿ ಒಗ್ಗುವ ಕಥಾಜಗತ್ತನ್ನು ತಮ್ಮ ಕವಿತೆಯೊಳಗೆ ತರುತ್ತಾ ಗೀತೆಗೆ ಕಥನದ ಸಂಲಗ್ನಮಾಡಿಸುತ್ತಿದ್ದರು. ಕುವೆಂಪು ಅವರ ಆಧ್ಯಾತ್ಮಿಕ, ವೈಚಾರಿಕ, ಕನ್ನಡಾಭಿಮಾನ ಮತ್ತು ಪ್ರಕೃತಿ ಪ್ರೇಮದ ಹಾಡಬಹುದಾದ ಸುಂದರ ಗೀತೆಗಳು ಆಗ ಎಲ್ಲೆಲ್ಲೂ ಪ್ರಚುರವಾಗಿದ್ದವು. ಕೆಲವು ಸಿನಿಮಾದಲ್ಲೂ ಬೇಂದ್ರೆ, ಕುವೆಂಪು, ಕೆ.ಎಸ್.ನ, ಆನಂದಕಂದ – ಮೊದಲಾದವರ ಕವಿತೆಗಳು ಬಂದವು. ಪರಮೇಶ್ವರಭಟ್ಟ, ಕರ್ಕಿಯಂಥ ಕವಿಗಳು ತಮ್ಮ ಭಾವಗೀತೆಗಳ ಮೂಲಕವೇ ನನಗೆ ಪ್ರಿಯರಾಗಿದ್ದರು.

ನನ್ನ ಮೇಲೆ ಅಡಿಗರ ಕಾವ್ಯದ ಗಾಢ ಪ್ರಭಾವವಿತ್ತು. ಅವರಂತೆ ಸಾಂದ್ರವಾಗಿ ಬರೆಯಬೇಕೆಂಬ ಹುಚ್ಚು. ಆದರೆ ಅವರು ಅನನುಕರಣೀಯ ಕವಿ! ಅನುಕರಿಸುವುದಕ್ಕೆ ಸುಲಭರಾಗಿದ್ದವರು ಕೆ.ಎಸ್.ನ, ಜಿಎಸ್ಸೆಸ್, ರಾಮಾನುಜನ್ ಮೊದಲಾದ ಕವಿಗಳು. ನಾನು ಈ ಕವಿಗಳ ದಾರಿಯಲ್ಲಿ ಸಾಕಷ್ಟು ಕವಿತೆಗಳನ್ನು ಬರೆದೆ. ಆದರೆ ನನ್ನ ಕವಿತೆಗೆ ಹಾಡುಗಬ್ಬದ ನಿಜವಾದ ಸ್ಪರ್ಶವಾದದ್ದು 'ಸೌಗಂಧಿಕಾ' ಎಂಬ ನನ್ನ ಷಟ್ಪದೀಕವಿತೆಯಲ್ಲಿ! ಅದು ಪ್ರವಾಹದ ವಿರುದ್ಧದ ಈಜಾಗಿತ್ತು. ಆದರೆ ಆ ಪದ್ಯಕ್ಕೆ ಸಿಕ್ಕ ಯಶಸ್ಸು ನನ್ನ ಸ್ವಂತ ಕಾವ್ಯಮಾರ್ಗದ ಉದ್ಘಾಟನೆ ಮಾಡಿತೆನ್ನಬಹುದು. 1977ರಲ್ಲಿ ಸೌಗಂಧಿಕಾ ಬಂದದ್ದು. ಮುಂದೆ ನಾನು ಗೀತಾತ್ಮಕವಾದ, ಲಯಸಮನ್ವಿತವಾದ ಅನೇಕ ಕವಿತೆಗಳನ್ನು ಬರೆಯ ತೊಡಗಿದೆ. ಹಾಡಬಹುದಾದ ಗೀತೆ, ಓದಬೇಕಾದ ಕವಿತೆ ಎರಡೂ ಪುಂಖಾನುಪುಂಖವಾಗಿ ನನ್ನ ಪೆನ್ನಿಂದ ಹೊರಹೊಮ್ಮಿದವು. ಕಾವ್ಯಸಂಗ್ರಹದೊಂದಿಗೆ ಗೀತಾಸಂಗ್ರಹಗಳು ಪ್ರಕಟವಾದವು. ಒಳ್ಳೆಯ ಕವಿಗಳೆಂದು ಹೆಸರಾಗಿದ್ದ ನಾವು ಕೆಲವರು ಹಾಡು ಬರೆಯುವುದು ದೊಡ್ಡ ಅಪರಾಧವೆಂಬಂತೆ ಕಟ್ಟಾ ನವ್ಯರ ಟೀಕೆಗೆ ಗುರಿಯಾಗಬೇಕಾಯಿತು. ಆದರೆ ಅದ್ಯಾವುದಕ್ಕೂ ಸೊಪ್ಪುಹಾಕದೆ ನನ್ನ ಕವಿತಾರಚನೆಯ ಜೊತೆಜೊತೆಗೇ ಗೀತೆಗಳ ರಚನೆಯೂ ಮುಂದುವರೆಯಿತು.

ಗೆಳೆಯ ಶ್ರೀನಾಥ ಮತ್ತು ಸಿ.ಆರ್. ಸಿಂಹ 'ಬಾಳೊಂದು ಭಾವಗೀತೆ' ಎಂಬ ಹೊಸ ಸಿನಿಮಾದ ನಿರ್ಮಾಣದಲ್ಲಿ ತೊಡಗಿದ್ದ ದಿನಗಳು. ಅವರು ನನ್ನ ಅತ್ಯಾಪ್ತ ಗೆಳೆಯರೂ ಆಗಿದ್ದ ಕಾರಣ ಸಿನಿಮಾಕ್ಕೆ ಹಾಡು ಬರೆಯಲು ಲಕ್ಷ್ಮಣರಾವ್, ವ್ಯಾಸರಾವ್ ಮತ್ತು ನನ್ನನ್ನು ಅವರು ಆಹ್ವಾನಿಸಿದರು. ನನ್ನ ಮೊದಲ ಸಿನಿಮಾ ಹಾಡನ್ನು ಸಂಗೀತಕ್ಕೆ ಅಳವಡಿಸಿದವರು ನನಗೆ ಮುಂದಿನ ದಿನಗಳಲ್ಲಿ ಆಪ್ತರಾದ ಹಂಸಲೇಖ ಅವರು. ಆ ದಿನಗಳಲ್ಲಿ ನನ್ನ ಮಕ್ಕಳ ಗೀತೆಗಳನ್ನು ಗೆಳೆಯ ಅಶ್ವತ್ಥ್ 'ಬಣ್ಣದಹಕ್ಕಿ' ಎಂಬ ಹೆಸರಿನಲ್ಲಿ ಪ್ರಚುರಪಡಿಸಿದ್ದರು. ಈ ಧ್ವನಿಸುರುಳಿಯ ನಿರ್ಮಾತೃಗಳು ರತ್ನಮಾಲಾ ಮತ್ತು ಅವರ ಪತಿ ಪ್ರಕಾಶ್. ಅದು ತುಂಬ ಜನಪ್ರಿಯವಾಗಿತ್ತು. ಆ ಕಾರಣಕ್ಕೇ ಪ್ರಾಯಃ ಸಿಂಹ ಶ್ರೀನಾಥ 'ಬಾಳೊಂದು ಭಾವಗೀತೆ' ಸಿನಿಮಾಕ್ಕೆ ಮಕ್ಕಳ ಹಾಡೊಂದನ್ನು ನನ್ನಿಂದ ಬರೆಸಿದರೆನ್ನಬೇಕು. ಖ್ಯಾತ ಗಾಯಕರೂ, ಆಪ್ತರೂ ಆಗಿರುವ ಎಸ್.ಪಿ. ಬಾಲಸುಬ್ರಹ್ಮಣ್ಯ ಮತ್ತು ಭಾವಗೀತಾ ಜಗತ್ತಿನಲ್ಲಿ ಈಗ ತಮ್ಮ ಇನಿದನಿಯಿಂದ ಹೆಸರಾಗಿರುವ ಮಂಗಳ ಆ ಗೀತೆಯನ್ನು ಹಾಡಿದರು. (ಮಂಗಳ ಆಗ ಪುಟ್ಟ ಹುಡುಗಿ!)

ಮುಂದೆ ಅನೇಕ ಮಕ್ಕಳ ಚಿತ್ರಗಳಿಗೆ ನಾನು ಮಕ್ಕಳ ಗೀತೆಗಳನ್ನು ಬರೆದೆ. 'ಜಂಬೂಸವಾರಿ' (ವಿಜಯಭಾಸ್ಕರ್ ಸಂಗೀತ, ಎ.ಎಸ್. ಮೂರ್ತಿಯವರ ಕಥೆ), 'ಚಿನ್ನಾರಿಮುತ್ತ' (ಸಿ. ಅಶ್ವತ್ಥ್ ಸಂಗೀತ, ನಾಗಾಭರಣರ ನಿರ್ದೇಶನ, ನನ್ನ ಕಥೆ ಕವಿತೆ), 'ಕೊಟ್ರೇಶಿಯ ಕನಸು' (ಅಶ್ವತ್ಥ್ ಸಂಗೀತ, ಕುಂವೀ ಕಥೆ, ನಾಗತಿಹಳ್ಳಿ ನಿರ್ದೇಶನ) ಅವುಗಳಲ್ಲಿ ಮುಖ್ಯವಾದವು. 'ಚಿನ್ನಾರಿಮುತ್ತ' ಬಂದು ಈಗ ಇಪ್ಪತ್ತೈದು ವರ್ಷಗಳಾಗಿವೆ. ಆ ಸಿನಿಮಾದ ಹಾಡುಗಳು ಈಗಲೂ ಚಾಲ್ತಿಯಲ್ಲಿವೆ! 'ರೆಕ್ಕೆ ಇದ್ದರೆ ಸಾಕೆ ಹಕ್ಕಿಗೆ ಬೇಕು ಬಾನು', 'ಎಷ್ಟೊಂದ್ ಜನ ಇಲ್ಲಿ ಯಾರು ನನ್ನೋರು', 'ಹೇಗಿದ್ದ ಹೇಗಾದ